| | | Rs. |
|---|---|---|
| August | ... | 2-30 |
| September | ... | 2-15 |
| October | ... | 2-05 |
| November | ... | 2-50 |
| December 1975 | ... | 2-40 |

In January 1974 it was Rs. 2.44 and in January 1975 it was Rs. 2,50. These are the statements that have been maintained by the Marketing Department.

**2-00 P.M.**

ಶ್ರೀ ಯು. ಟಿ. ಫರೀದ್.—ರೇಷನ್ ಇಲ್ಲದ ಕಡೆ ಒಂದು ಕಾರ್ಡಿಗೆ ಒಂದು ತಿಂಗಳಿಗೆ ೮ ಕಿಲೋ ರೈಸ್‌ನ್ನು ಕೊಡುತ್ತೇವೆಂದು ಹೇಳಿದ್ದೀರಿ. ತಾವು ಮನೆವಾರ್ತೆ ತಿಳಿದಂಥವರು ತಮಗೇ ಗೊತ್ತಿದೆ ೮ ಕಿಲೋ ಅಕ್ಕಿಯನ್ನು ಒಂದು ತಿಂಗಳಿಗೆಂದು ಕೊಟ್ಟರೇ ಅವರು ಎಷ್ಟು ದಿವಸ ಇಟ್ಟುಕೊಂಡು ಊಟ ಮಾಡಬೇಕು?

ಶ್ರೀ ಕೊಣಂದೂರು ಲಿಂಗಪ್ಪ.—ಅಕ್ಕಿಯನ್ನು ನೋಡುತ್ತಾ ಕುಳಿತುಕೊಳ್ಳಿ.

ಶ್ರೀ ಯು. ಟಿ. ಫರೀದ್,—ಇದರಿಂದ ಸೌತ ಕೆನರಾದ ಜನ ಭಯಭೀತರಾಗಿದ್ದಾರೆ. ಇಂಟರ್ ಡಿಸ್ಟ್ರಿಕ್ಟ್ ಬ್ಯಾನ್ ತೆಗೆದುಹಾಕಿ ಎಂದು ಹೇಳಿದರೆ ತಾವು ತೆಗೆದುಹಾಕುತ್ತಾ ಇಲ್ಲ. ಸೌತ್ ಕೆನರಾಗೆ ಮಿನಿಮಂ ೧೫ ಸಾವಿರ ಕ್ವಿಂಟಾಲ್ ಕೊಡುತ್ತೀರಾ?

ಶ್ರೀ ಮತಿ ಇ. ಇ. ವಾಜ್.—೮ ಕಿಲೋ ಅಕ್ಕಿಯನ್ನು ಕೊಡುವುದರ ಜೊತೆಗೆ, ಗೋಧಿ, ಮೈದಾ ರವೆ ಕೊಡುತ್ತೇವೆ. ಉಳಿದಿದ್ದನ್ನು ಸ್ವಲ್ಪ ಮಟ್ಟಿಗೆ ಓಪನ್ ಮಾರ್ಕೆಟ್‌ನಿಂದ ಕೊಂಡುಕೊಳ್ಳಬೇಕಾಗುತ್ತದೆ ಇನ್‌ಫಾರ್ಮಲ್ ರೇಷನ್ನಿನಿಂದ ಎಷ್ಟು ಜನಕ್ಕೆ ಅನುಕೂಲವಾಗುತ್ತದೆಂಬುದನ್ನು ನೋಡಿ ಹಾಗೂ ಪ್ರಕೂರ್‌ಮೆಂಟ್ ಎಷ್ಟರಮಟ್ಟಿಗೆ ಹೋಗುತ್ತದೆ ಎಂಬುದನ್ನು ನೋಡುತ್ತೇವೆ.

(ii) *re : failure of crops in Magadi Taluk.*

ಶ್ರೀ ಬೆಟ್ಟಸ್ವಾಮಿಗೌಡ (ಕುದೂರು).—ಮಾಗಡಿ ತಾಲ್ಲೂಕಿನಲ್ಲಿ ಬೆಳೆಗಳು ವಿಫಲಗೊಂಡಿರುವುದರಿಂದ ರೈತರುಗಳು ತೊಂದರೆಗೀಡಾಗಿರುವ ವಿಚಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ (ಕೈಗಾರಿಕಾ ಮತ್ತು ಸಂಸದೀಯ ವ್ಯವಹಾರ ಶಾಖೆಗಳ ಮಂತ್ರಿಗಳು).—ಕಂದಾಯ ಶಾಖೆಯ ಮಂತ್ರಿಗಳ ಪರವಾಗಿ ನಾನು ಈ ಹೇಳಿಕೆ ಓದುತ್ತೇನೆ.—

೧೯೭೩-೭೪ ರಲ್ಲಿ ಮಾಗಡಿ ತಾಲ್ಲೂಕಿನಲ್ಲಿ ಅನೀರಿಕ್ಷಿತವಾಗಿ ಅತಿವೃಷ್ಟಿಯಾಯಿತು. ಈ ವರ್ಷದಲ್ಲಿ ೧,೩೩೩.೮ ಮಿಲಿ ಮೀಟರ್ ಮಳೆಯಾಯಿತು. ಇದಕ್ಕೂ ಮೊದಲಿನ ವರ್ಷಗಳಲ್ಲಿ ಅಂದರೆ ೧೯೭೧-೭೨ ಹಾಗೂ ೧೯೭೨-೭೩ ರಲ್ಲಿ ಕ್ರಮವಾಗಿ ೯೩೧.೩ ಮಿಲಿ ಮೀಟರ್ ಮತ್ತು ೯೫೨.೭ ಮಿಲಿ ಮೀಟರ್ ಗಳಷ್ಟು ಮಳೆಯಾಯಿತು. ಈ ಹೆಚ್ಚಿನ ಮಳೆಯಿಂದ ಭತ್ತದ ಬೆಳೆ ಹುಲುಸಾಗಿ ಬೆಳೆಯಿತು. ಆದರೆ ಈ ತಾಲ್ಲೂಕಿನ ಆತಿ ಮುಖ್ಯ ಬೆಳೆಯಾದ ರಾಗಿ ಬೆಳೆ ನಷ್ಟವಾಯಿತು. ಈ ವರ್ಷದಲ್ಲಿ ೧,೫೨೬ ಕ್ವಿಂಟಾಲ್ ಭತ್ತದ ಬೆಳೆ ಸಂಗ್ರಹವಾಯಿತು. ರಾಗಿ ಮತ್ತು ಭತ್ತದ ಪೈರುಗಳಿಗೆ ರೋಗ ತಗುಲಿರಲಿಲ್ಲ. ಪರಿಸ್ಥಿತಿಯ ಹೇಳುವಷ್ಟು ಗಂಭೀರವಾಗಿರಲ್ಲಿಲ್ಲ. ಬೇಸಾಯದ ಕೂಲಿಕಾರರಿಗೆ ಸಾಕಷ್ಟು ಕೂಲಿ ದೊರೆತಂತೆ ಜನಜೀವನ ಸಮಾಧಾನಕರವಾಗಿತ್ತು.

ಶ್ರೀ ಬೆಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಅತ್ಯಂತ ಕಂಗಾಲಾದ ಪರಿಸ್ಥಿತಿಗೆ ತದ್ವಿರುದ್ಧವಾದ ಹೇಳಿಕೆಯನ್ನು ಮಾನ್ಯ ಕಂದಾಯ ಮಂತ್ರಿಗಳು ಹೇಳಿದ್ದಾರೆ. ಅವರು ನಮ್ಮ ತಾಲ್ಲೂಕಿನವರೇ ಆಗಿದ್ದು, ಅವರಿಗೂ ಹೆಚ್ಚಿನ ಸಂಪರ್ಕ ಕಡಿಮೆ ಇದೆ. ಭತ್ತದ ಬೆಳೆಗೆ ಸಕಾಲದಲ್ಲಿ ಮಳೆ ಆಗಲ್ಲಿಲ್ಲ, ಭತ್ತ ನಾಟಿ ಮಾಡಿದ ಕಾಲಕ್ಕೂ ಮಳೆ ಬರಲಿಲ್ಲ, ಇದಕ್ಕೆ ಸಂಬಂಧಪಟ್ಟಂತೆ ಅವರೆಲ್ಲಾ ಕೂಡಿ ೧೭-೧೧-೧೯೭೫ ರಲ್ಲಿ

ರೈತರೆಲ್ಲಾ ಸಭೆ ಸೇರಿ ಸರ್ಕಾರಕ್ಕೆ ಮನವಿಯನ್ನು ಕೂಡ ಸಲ್ಲಿಸಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ವನ್ನು ತೆಗೆದುಕೊಂಡಿದ್ದಾರೆ? ರೈತರಿಗೆ ಬಹಳ ಕಿರುಕುಳವಾಗಿದೆ, ಲೆವಿ ಕೂಡ ತಾವು ಹೇಳಿರುವ ಪ್ರಕಾರ ೧.೫೨೬ ಕ್ವಿಂಟಾಲ್ ಭತ್ತ ಲೆವಿ ಸಂಗ್ರಹವಾಯಿತು ಎಂದು ಹೇಳಿದ್ದೀರಿ ಅಲ್ಲಿ ಕಿರುಕುಳವನ್ನು ಕೊಟ್ಟು ಲೇವಿಯನ್ನು ವಸೂಲಿ ಮಾಡಿಸಿದ್ದಾರೆ. ಅದರಿಂದ ಸರ್ಕಾರವರು ತೀವ್ರವಾಗಿ ಇದನ್ನು ಪರಿಶೀಲಿಸಿ ಪರಿಹಾರವನ್ನು ಒದಗಿಸಿ ಕೊಡಬೇಕು ಮತ್ತು ಅಲ್ಲಿಯ ಸ್ಥಳೀಯ ಅಧಿಕಾರಿಗಳು ಏನು ರಿಪೋರ್ಟನ್ನು ಕೊಟ್ಟಿದ್ದಾರೆಂಬುದನ್ನು ತಿಳಿಸುತ್ತೀರಾ ಸ್ವಾಮಿ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಈಗ ತಾನೇ ಹೇಳಿದರು, ಕೇಂದ್ರಾಯ ಮಂತ್ರಿಗಳು ಅವರ ಪಕ್ಕದ ಕ್ಷೇತ್ರದಿಂದಲೇ ಬಂದಿದ್ದಾರೆಂದು, ಅವರೇ ಸೈನ್ ಮಾಡಿರತಕ್ಕಂಥ ಹೇಳಿಕೆಯನ್ನು ನಾನು ಓದ್ದಿದು, ಮಾನ್ಯ ಸದಸ್ಯರ ಕಳವಳವನ್ನು ಮಾನ್ಯ ಕೇಂದ್ರಾಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಕೇಂದ್ರಾಯ ಮಂತ್ರಿಗಳು ಅವರ ಪಕ್ಷದಿಂದ ಬಂದಿಲ್ಲವಲ್ಲ ಅದೇ ವ್ಯತ್ಯಾಸ ಬಂದಿರುವುದು.

ಶ್ರೀ ಎಸ್. ಎಂ. ಕೃಷ್ಣ.—ಇಲ್ಲಿ ಆ ಪಕ್ಷದಿಂದ ಬಂದಿದ್ದಾರೆ, ಈ ಪಕ್ಷದಿಂದ ಬಾದಿದ್ದಾರೆ ಎನ್ನುವ ತಕ್ಕಂಥ ಪ್ರಶ್ನೆಯಿಲ್ಲ.

ಶ್ರೀ ಬೆಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಈಗ ಅಲ್ಲಿರತಕ್ಕಂಥ ಪರಿಸ್ಥಿತಿಗೆ ಒಬ್ಬ ಅಧಿಕಾರಿ ಯನ್ನು ಅಲ್ಲಿಗೆ ಕಳುಹಿಸಿ ಅಲ್ಲಿಯ ನಿಜಾಂಶವೇನು ಎಂಬುದನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುತ್ತೀರಾ ಸ್ವಾಮಿ?

ಶ್ರೀ ಎಸ್. ಎಂ. ಕೃಷ್ಣ.—ವಿಶೇಷವಾದ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸಬೇಕಾದಂಥ ಆಗತ್ಯತೆ ಇಲ್ಲಿ ಕಾಣುವುದಿಲ್ಲ ಏತಕ್ಕೆಂದು ಹೇಳಿದರೆ ೧೯೭೧-೭೨-೭೩ ರಲ್ಲಿ ಎಷ್ಟು ಮಳೆ ಬಿತ್ತು ಎನ್ನುವುದಕ್ಕೆ ಇಲ್ಲಿ ದಾಖಲೆಗಳು ಇವೆ. ಇತ್ತೀಚೆಗೆ ಎಷ್ಟು ಅತಿವೃಷ್ಟಿಯಾಯಿತು ಎಂಬುದನ್ನು ಒಪ್ಪಿದ್ದಾರೆ, ನಾನು ಆಗಲೇ ತಿಳಿಸಿದ ಹಾಗೆ ಈ ವಿಷಯವನ್ನು ಮಾನ್ಯ ಕೇಂದ್ರಾಯ ಮಂತ್ರಿಗಳಿಗೆ ತಿಳಿಸಿ ಸೂಕ್ತ ಪರಿಹಾರವನ್ನು ಕಾನೂನಿನ ಚೌಕಟ್ಟಿನೊಳಗೆ ದೊರಕಿಸುವಂತೆ ಪ್ರಯತ್ನ ಮಾಡುತ್ತೇವೆ.

*(iii) re.—rise in price of Sandelwood Suplied to village Artisas of*

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಸ್ವಾಮಿ ಗ್ರಾಮಾಂತರ ಶಿಲ್ಪಿಕಾರರಿಗೆ ಹಾಗೂ ಇತರರಿಗೆ ಒದಗಿಸುತ್ತಿರುವ ಗಂಧದ ಮರದ ಬೆಲೆಯು ಹೆಚ್ಚಿರುವ ವಿಚಾರಗಳ ಬಗ್ಗೆ ಅರಣ್ಯ ಮಂತ್ರಿಗಳ ಗಮನ ವನ್ನು ಸೆಳೆಯುತ್ತೇನೆ.

SRI C. Y. PATIL (Minister For Forests).—Sir, I beg to make the following statment:—

Sandalwood produced in this State is supplied mainly to Government sandalwood Oil Factories for production of oil which has an export market. A small quantity of sandalwood is also made available on retail sale basis for meeting the bonafide requirement of individuals, mainly for religious purposes and to religious institutions. The tate charged is full retail sale rate, In addition Gudigars are permitred to select and obtain their requirement of sandalwood from the Goverrment depots. They are charged only 50% of the retail sale rate the blance amount being reimbursed by Industries Department to Forest Department.

Retial sale rates for the various sandalwood classificatins are fixed by the Department periodically on the basis of auction rates received in the Government sandal depots in Tamilnadu. This procedure is adopted as no sandalwood is sold in auction in Karnataka